155ನೇ = (48)
ಡ272 4R
0702

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಚುನಾವಣಾ ಕ್ಷೇತ್ರ) ಇವರು ನಿಯಮ-330 ರಡಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ.**

**ವಿಷಯ: ಶ್ರೀ. ನಿರಾಣಿ ಹಣಮಂತ್ ರುದ್ರಪ್ಪ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಇವರು ನಿಯಮ-330 ರ ಕೃಷ್ಣಾ ಮೇಲ್ದಂಡೆ ಯೋಜನೆಯ ವ್ಯಾಪ್ತಿಗೆ ಒಳಪಡುವ ನೂರಾರು ಗ್ರಾಮಗಳನ್ನೊಳಗೊಂಡ ಸುಮಾರು 5 ಲಕ್ಷಕ್ಕಿಂತ ಹೆಚ್ಚು ಸಂತ್ರಸ್ಥ ರೈತ ಕುಟುಂಬಗಳ ಈ ನಾಡಿಗಾಗಿ ತಮ್ಮ ಆಸ್ತಿ ಅಂತಸ್ತುಗಳನ್ನು ತ್ಯಾಗಿ ಮಾಡಿದ ರೈತರ ಬದುಕು-ಭವಣೆಗಳು (ವಾಸ್ತವಿಕವಾಗಿ ಎದುರಿಸುತ್ತಿರುವ ಸಮಸ್ಯೆಗಳು) ಮತ್ತು ಪ್ರಸ್ತುತ ಇವರ ಜೀವನ ಗುಣಮಟವನ್ನು ಉನ್ನತೀಕರಿಸಲು ಹಾಗೂ ಪುನರ್‌ವಸತಿ & ಪುನರ್‌ನಿರ್ಮಾಣ ಕಲ್ಪಿಸುವ ನಿಟ್ಟಿನಲ್ಲಿ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ತಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸುವ ಕುರಿತು ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರಗಳನ್ನು ಸಲ್ಲಿಸುವ ಕುರಿತು.**

*****

**ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1 & 2:**

ಕೃಷ್ಣಾ ನ್ಯಾಯಾಧೀಕರಣ-1 ರಲ್ಲಿ ರಾಜ್ಯಕ್ಕೆ ಹಂಚಿಕೆಯಾಗಿರುವ 734 ಟಿ.ಎಂ.ಸಿ. ಪೈಕಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1 & 2 ರ ಯೋಜನೆಗೆ 173.00 ಟಿ.ಎಂ.ಸಿ. ನೀರಿನ ಹಂಚಿಕೆ ಆಗಿರುತ್ತದೆ. ಸದರಿ ಹಂಚಿಕೆಯಡಿ 11 ಯೋಜನೆಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದ್ದು, ಉತ್ತರ ಕರ್ನಾಟಕದ 5 ಜಿಲ್ಲೆಗಳಾದ ಕಲಬುರಗಿ, ಯಾದಗಿರಿ, ವಿಜಯಪುರ, ಬಾಗಲಕೋಟೆ ಹಾಗೂ ರಾಯಚೂರು ಅಡಿಯಲ್ಲಿ ಸುಮಾರು 6,22,023 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಯೋಜನೆಗಳ ಅನುಷ್ಠಾನದಿಂದ ಸಂಬಂಧಿಸಿದ 176 ಗ್ರಾಮಗಳು ಬಾಧಿತವಾಗಿದ್ದು, ಈ ಗ್ರಾಮಗಳ ಪುನಶ್ಚೇತನಕ್ಕಾಗಿ 136 ಪುನರ್‌ವಸತಿ ಕೇಂದ್ರಗಳನ್ನು ನಿರ್ಮಿಸಲಾಗಿದೆ. ಇದರಲ್ಲಿ, 134 ಪುನರ್‌ವಸತಿ ಕೇಂದ್ರಗಳನ್ನು ಆಯಾ ಗ್ರಾಮ ಪಂಚಾಯಿತಿಗಳಿಗೆ ಹಸ್ತಾಂತರಿಸಲಾಗಿದೆ. ಉಳಿದ 2 ಕೇಂದ್ರಗಳನ್ನು ಹಸ್ತಾಂತರಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1 & 2ರಡಿ ಆಸ್ತಿ-ಪಾಸ್ತಿಗಳನ್ನು ಕಳೆದುಕೊಂಡಿರುವ ಸಂತ್ರಸ್ಥರಿಗಾಗಿ ಪುನರ್‌ವಸತಿ & ಪುನರ್‌ನಿರ್ಮಾಣದ ನಿಯಮಾವಳಿಯನ್ವಯ ಕಾಲಕಾಲಕ್ಕೆ ವಿವಿಧ ಪರಿಹಾರಗಳನ್ನು ಒದಗಿಸಲಾಗಿದ್ದು ವಿಳಂಬಕ್ಕೆ ಆಸ್ಪದ ನೀಡದೆ ಅಗತ್ಯ ಮೂಲಭೂತ ಸೌಕರ್ಯ ಕಾಮಗಾರಿಗಳನ್ನು ಕೈಗೊಂಡು ಮುಂದಿನ ನಿರ್ವಹಣೆಗಾಗಿ ಆಯಾ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಿದ್ದು, ಸಂತ್ರಸ್ಥ ಕುಟುಂಬಗಳ ಜೀವನಮಟ್ಟ ಸುಧಾರಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿರುತ್ತದೆ.

**ಕೃಷ್ಣಾ ಮೇಲ್ದಂಡೆ ಯೋಜನೆ ಹಂತ- 3:**

ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ-2ರ ಅಂತಿಮ ತೀರ್ಪಿನಲ್ಲಿ ರಾಜ್ಯಕ್ಕೆ ಹಂಚಿಕೆಯಾದ ಒಟ್ಟಾರೆ 173 ಟಿ.ಎಂ.ಸಿ. (ನದಿ ಪಾತ್ರದಡಿ ನೈಸರ್ಗಿಕ ಹರಿವು 7 ಟಿ.ಎಂ.ಸಿ ಒಳಗೊಂಡು) ಪೈಕಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ಯೋಜನೆಗೆ 130 ಟಿ.ಎಂ.ಸಿ. ಹಂಚಿಕೆಯಾಗಿರುತ್ತದೆ. ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ-2 ಅಂತಿಮ ತೀರ್ಪು ಕೇಂದ್ರ ಸರ್ಕಾರದಿಂದ ಗೆಜೆಟ್ ಪ್ರಕಟಣೆ ಆಗಬೇಕಾಗಿರುತ್ತದೆ. ಈ ಯೋಜನೆಯಡಿ 9 ಉಪ ಯೋಜನೆಗಳಡಿ ಒಟ್ಟಾರೆ 5.94 ಲಕ್ಷ ಹೆಕ್ಟೇರ್ (14.67 ಲಕ್ಷ ಎಕರೆ) ಅಚ್ಚುಕಟ್ಟು ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವುದಾಗಿರುತ್ತದೆ.

ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಡಿಯಲ್ಲಿ ಮುಳುಗಡೆ ಬಾಧಿತವಾದ 20 ಬಾಧಿತ ಗ್ರಾಮಗಳಿಗೆ ಪರ್ಯಾಯವಾಗಿ ಅಗತ್ಯ ಮೂಲಭೂತ ಸೌಕರ್ಯ ಒದಗಿಸಿ 24 ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸಲು ಯೋಜಿಸಲಾಗಿರುತ್ತದೆ.

- ಈ ಪೈಕಿ 10 ಪುನರ್ವಸತಿ ಕೇಂದ್ರಗಳ ಲೇಔಟಗಳ ನಕ್ಷೆಗಳಿಗೆ ಅನುಮೋದನೆ ಪಡೆದು 10 ಪುನರ್ವಸತಿ ಕೇಂದ್ರಗಳಲ್ಲಿ, ಹೊಸ ಭೂಸ್ವಾಧೀನದ ನಿಯಮಾವಳಿಯಂತೆ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.
- ಬಾಕಿ ಉಳಿದ 13 ಪುನರ್ವಸತಿ ಕೇಂದ್ರಗಳಿಗೆ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆಯು ವಿವಿಧ ಹಂತಗಳಲ್ಲಿರುತ್ತವೆ.
- 1 ಗದ್ದನಕೇರಿ ಗ್ರಾಮದ ಸ್ವಾಧೀನದ ಕುರಿತು ತಾಂತ್ರಿಕವಾಗಿ ಪರಿಶೀಲಿಸಿ ತೀರ್ಮಾನಿಸಬೇಕಾಗಿದೆ.

ದಿನಾಂಕ:16.09.2025ರ ವಿಶೇಷ ಸಚಿವ ಸಂಪುಟದ ನಿರ್ಣಯದನ್ವಯ, ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-IIIರ ಭೂಸ್ವಾಧೀನ ಪ್ರಕ್ರಿಯೆಯನ್ನು ಒಂದೇ ಹಂತದಲ್ಲಿ ತ್ವರಿತವಾಗಿ ಕೈಗೆತ್ತಿಕೊಳ್ಳುವ ಕುರಿತಂತೆ, ಒಪ್ಪಂದದ ಐತೀರ್ಪು ರಚಿಸಲು ಏಕರೂಪ ದರ ನಿಗಧಿಪಡಿಸಲು ಹಾಗೂ ಸಂಬಂಧಿಸಿದ ಇನ್ನಿತರೆ ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ದಿನಾಂಕ:09.10.2025 ಅನ್ನು ಹೊರಡಿಸಲಾಗಿದೆ.

ಸದರಿ ಆದೇಶದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರ ಭೂಸ್ವಾಧೀನಕ್ಕೆ ಅಗತ್ಯವಿರುವ ಮುಳುಗಡೆ ಜಮೀನು & ಕಾಲುವೆ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ನಿಗಧಿಪಡಿಸಿದ ಒಪ್ಪಂದದ ಐತೀರ್ಪು ದರಗಳು (Consent Award Rates) ಈ ಕೆಳಗಿನಂತಿವೆ:

ಮುಳುಗಡೆ ಜಮೀನು

| | |
|---|---|
| ಖುಷಿ (Mt) ಭೂಮಿಗೆ (Dry Land) | : ರೂ.30.00 ಲಕ್ಷ ಪ್ರತಿ ಎಕರೆ |
| ತರಿ ಜಮೀನಿಗೆ (Wet Land) | : ರೂ.40.00 ಲಕ್ಷ ಪ್ರತಿ ಎಕರೆ |

ಕಾಲುವೆ ಜಮೀನುಗಳ ಭೂಸ್ವಾಧೀನತೆಗಾಗಿ

| | |
|---|---|
| ಖುಷಿ(Mt) ಭೂಮಿಗೆ (Dry Land) | : ರೂ.25.00 ಲಕ್ಷ ಪ್ರತಿ ಎಕರೆ |
| ತರಿ ಜಮೀನಿಗೆ (Wet Land) | : ರೂ.30.00 ಲಕ್ಷ ಪ್ರತಿ ಎಕರೆ |

ಹಾಗೂ ಯೋಜನೆ ಅಡಿ ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಲ್ಪಿಸುವ ಬದಲಾಗಿ ಪರಿಹಾರ ಪ್ಯಾಕೇಜ್ ನೀಡಲು ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ನೀತಿಯನ್ನು ರೂಪಿಸುವುದು ಎಂದು ಆದೇಶಿಸಲಾಗಿರುತ್ತದೆ. ಇದರನ್ವಯ, ಆಲಮಟ್ಟಿ ಹಿನ್ನೀರಿನಲ್ಲಿ ಮುಳುಗಡೆ ಹೊಂದಲಿರುವ ಗ್ರಾಮಗಳಿಗೆ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಲ್ಪಿಸುವ ಬದಲಾಗಿ ಪುನರ್ವಸತಿ ಮತ್ತು ಪುನರ್ ನಿರ್ಮಾಣದ ಪರ್ಯಾಯ ನೀತಿಯನ್ನು ರೂಪಿಸುವಂತೆ ನಿರ್ಣಯಿಸಲಾಗಿದ್ದು, ಪ್ರಕ್ರಿಯೆ ಜಾರಿಯಲ್ಲಿದೆ.

ಸಂಖ್ಯೆ:ಜಸಂಇ 11 ಡಬ್ಲ್ಯೂಬಿಎಂ 2026

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿಗಳು